'ನೀರ್ ದೋಸೆ' ಚಿತ್ರದ ಹರಿಪ್ರಿಯಾ ಸವಾಲಿನ ಪಾತ್ರವನ್ನು ನಿರ್ವಹಿಸಿದ್ದನ್ನು ಗಮನಿಸಬೇಕು. 'ಯು ಟರ್ನ್' ಚಿತ್ರದ ಶ್ರದ್ಧಾ ಶ್ರೀನಾಥ್ ಚೊಚ್ಚಲು ಚಿತ್ರದಲ್ಲೇ ನೀಡಿರುವ ನಟನೆಯೂ ಗಮನಾರ್ಹ.

### ದೇವರ ನಾಡಲ್ಲಿ ತಳಮಳ

ವರ್ತಮಾನದ ತವಕತಲ್ಲಣಗಳನ್ನು ದೃಶ್ಯಮಾಧ್ಯಮದ ಮೂಲಕ ಶೋಧಿಸುವ ನಿರ್ದೇಶಕರ ಪಂಕ್ತಿಯಲ್ಲಿ ಗಮನಸೆಳೆಯುವ ಕ್ರಿಯಾಶೀಲರಲ್ಲಿ ಬಿ. ಸುರೇಶ್ ಒಬ್ಬರು. ಅವರ 'ದೇವರ ನಾಡಲ್ಲಿ' ಸಿನಿಮಾ ಧರ್ಮಗಳ ಕಾರಣದಿಂದಾಗಿ ಮನುಷ್ಯರ ನಡುವೆ ಉಂಟಾಗಿರುವ ಅಪನಂಬಿಕೆಯ ಕುರಿತು ಮಾತನಾಡುತ್ತದೆ. ಸಾಮಾಜಿಕ ಸಾಮರಸ್ಯಕ್ಕೆ ಕಾರಣವಾಗಬೇಕಿದ್ದ ವಿದ್ಯಾಸಂಸ್ಥೆಯೊಂದರ ಪರಿಸರ, ಬಿರುಕುಗಳನ್ನು ಸೃಷ್ಟಿಸುವ ತಾಣವಾಗಿ ಮಾರ್ಪಡುವ ವಿಪರ್ಯಾಸ ಚಿತ್ರದಲ್ಲಿದೆ. ಸಚಿವರು ಕಾಲೇಜಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಕಾಲೇಜಿನಲ್ಲಿ ಸ್ಫೋಟ ಸಂಭವಿಸುತ್ತದೆ. ಇದರ ಹಿನ್ನೆಲೆಯಲ್ಲಿ ಅನಾವರಣಗೊಳ್ಳುವ ಕೋಮುಗಳ ನಡುವಿನ ವೈಮನಸ್ಸು, ರಾಜಕಾರಣದ ಒಳಸುಳಿಗಳನ್ನು ಸುರೇಶ್ ಚಿತ್ರಿಸಿದ್ದಾರೆ. 'ದೇವರ ನಾಡಲ್ಲಿ' ಒಂದು ಚಿತ್ರವಾಗಿ ಉಳಿಯದೆ ನಾವು ಬದುಕುತ್ತಿರುವ ಸನ್ನಿವೇಶವನ್ನು ನಮಗೇ ಕಾಣಿಸುವ ಒಂದು ವಿಶೇಷ ಪ್ರಯತ್ನ.

### ಸಂಬಂಧಗಳಿಗೆ ಹೊಸ ಬಣ್ಣ

ಹೇಮಂತ್ ಎಂ. ರಾವ್ ನಿರ್ದೇಶನದ 'ಗೋಧಿ ಬಣ್ಣ...' ಸಿನಿಮಾ, ಮನುಷ್ಯ ಸಂಬಂಧಗಳ ಅನನ್ಯತೆಯನ್ನು ಪ್ರತಿಪಾದಿಸುವ ಗುಣದಿಂದಾಗಿ ಗಮನಸೆಳೆಯುತ್ತದೆ. ಅಲ್ಜಮೈರ್ ಕಾಯಿಲೆಯಿಂದಾಗಿ ಮರೆಗುಳಿಯಾದ ಹಿರಿಯ ನಾಗರಿಕರೊಬ್ಬರ ನಾಪತ್ತೆಯ ನೆಪದಲ್ಲಿ ಆಧುನಿಕ ಸಂದರ್ಭದಲ್ಲಿ ಉಂಟಾಗುತ್ತಿರುವ ಸಂಬಂಧಗಳ ಸವಕಳಿಯ ಕುರಿತು ಸಿನಿಮಾ ಸಹೃದಯರ ಗಮನಸೆಳೆಯುತ್ತದೆ. ಸಂಬಂಧಗಳನ್ನು ಗೌರವಿಸುವ ಹಾಗೂ ನಿರ್ಲಕ್ಷಿಸುವ ಎರಡೂ ಮಾದರಿಗಳನ್ನು ಸೃಷ್ಟಿಸಿರುವ ನಿರ್ದೇಶಕರು, ನಮ್ಮ ಆದ್ಯತೆ ಯಾವುದಿರಬೇಕು ಎನ್ನುವ ಜಿಜ್ಞಾಸೆಯೊಂದನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಉಂಟುಮಾಡಲು ಪ್ರಯತ್ನಿಸಿದ್ದಾರೆ. ಅನಂತನಾಗ್ ಹಾಗೂ ಶ್ರುತಿ ಹರಿಹರನ್ ಅವರ ಚೇತೋಹಾರಿ ಅಭಿನಯ ಸಿನಿಮಾದ ಆರ್ದ್ರತೆಯನ್ನು ಹೆಚ್ಚಿಸಿದೆ.

### ಯಶಸ್ಸಿನ ತಿರುವಿನಲ್ಲಿ...

ಪವನ್ ಕುಮಾರ್ ನಿರ್ದೇಶನದ 'ಯು ಟರ್ನ್' ಚಿತ್ರಕಥೆಯ ಕಸುಬುದಾರಿಕೆ ಹಾಗೂ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯ ಕಾರಣದಿಂದಾಗಿ ವಿಶೇಷ ಎನ್ನಿಸುವ ಸಿನಿಮಾ. ಫ್ಲೈಓವರ್ ಮೇಲೆ ಉಂಟಾಗುವ ಅಪಘಾತಗಳ ಮರ್ಮ ಹುಡುಕಹೊರಟ ಪತ್ರಕರ್ತೆಯೊಬ್ಬಳು ತಾನೇ ಗಂಡಾಂತರದಲ್ಲಿ ಸಿಕ್ಕಿಬೀಳುವುದು ಹಾಗೂ ಅದರಿಂದ ಪಾರಾಗುವ ಪ್ರಯತ್ನದಲ್ಲಿ ಸಮಸ್ಯೆಯ ಸಿಕ್ಕು ಬಿಡಿಸುವ ಕಥೆಯಲ್ಲಿನ ಕೌತುಕ ಸಿನಿಮಾಕ್ಕೆ ನೋಡಿಸಿಕೊಳ್ಳುವ ಗುಣ ಕೊಟ್ಟಿದೆ. ಶ್ರದ್ಧಾ ಶ್ರೀನಾಥ್, ದಿಲೀಪ್ ರಾಜ್, ರೋಜರ್ ನಾರಾಯಣ್‌ರ ಅಭಿನಯ ಚಿತ್ರದ ವಿಶೇಷಗಳಲ್ಲೊಂದು. ನಾಗರಿಕ ಪ್ರಜ್ಞೆಯ ಬಗ್ಗೆ ತಿಳಿಹೇಳುವುದರ ಜೊತೆಗೆ, ದೆವ್ವದ ಕಥೆಯೊಂದನ್ನು ತಳಕು ಹಾಕಿಕೊಂಡಿರುವ ವಿರೋಧಾಭಾಸ ಚಿತ್ರದಲ್ಲಿದೆ.

### ರೂಪಕವಾದ ನೆರಳು

ಎಸ್.ಡಿ. ಅರವಿಂದ್ ನಿರ್ದೇಶನದ 'ಲಾಸ್ಟ್ ಬಸ್' ರಂಜನೆಯ ಜೊತೆಗೆ ಚಿಂತನೆಗೆ ಪ್ರಚೋದಿಸುವ ಚಿತ್ರವೂ ಹೌದು. ಇತ್ತೀಚಿನ ಕನ್ನಡ ಚಿತ್ರಗಳಲ್ಲಿ ಸಾಮಾನ್ಯವಾದ 'ದೆವ್ವದ ನೆರಳು' ಈ ಚಿತ್ರದಲ್ಲಿ ಇದ್ದರೂ, ಅದನ್ನೊಂದು ರೂಪಕವಾಗಿ ಬಳಸುವಲ್ಲಿ ನಿರ್ದೇಶಕರ ಪ್ರಯತ್ನ ಕುತೂಹಲಕರವಾಗಿದೆ. ಅಂತರಂಗದಲ್ಲಿನ ಭಯಕ್ಕೆ ವ್ಯಾಪಾರಿ ಸ್ವರೂಪವೂ ಇರುವುದನ್ನು ಅರವಿಂದ್ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಭೀತಿಯ ಸಂದರ್ಭದಲ್ಲಿ ಅನಾವರಣಗೊಳ್ಳುವ ವ್ಯಕ್ತಿತ್ವದ ಹಲವು ಮುಖಗಳ ಚಿತ್ರಣ ಸೊಗಸಾಗಿದೆ. ತಾಂತ್ರಿಕವಾಗಿ ಸಿನಿಮಾ ಉತ್ತಮವಾಗಿದೆ. 'ಕತ್ತಲೆಗೆ ಮುಖವಿಲ್ಲ, ಬೆಳಕಿಗೆ ಬೆನ್ನಿಲ್ಲ' ಎನ್ನುವ ಚಿತ್ರದ ಗೀತೆಯೊಂದರ ಸಾಕಾರದಂತೆ ಅನಂತ ಅರಸ್ ಛಾಯಾಗ್ರಹಣ ಕಾಣಿಸುತ್ತದೆ. ಅವಿನಾಶ್, ಮೇಘಶ್ರೀ, ಪ್ರಕಾಶ್ ಬೆಳವಾಡಿ ಅಭಿನಯ ಸಿನಿಮಾದ ವಿಶೇಷಗಳ ಸಾಲಿಗೆ ಸೇರುತ್ತದೆ.



ನಿರುತ್ತರದಲ್ಲಿ ಕಿರಣ್ ಶ್ರೀನಿವಾಸ್ ಮತ್ತು ಐಂದ್ರಿತಾ ರೇ



ಪುನೀತ್ ರಾಜಕುಮಾರ್

### ಭಿನ್ನ ಪ್ರಯತ್ನದ 'ಅಂಬಾ'

ಯೋಗರಾಜ ಭಟ್ ನಿರ್ದೇಶನದ 'ದನ ಕಾಯೋನು' ತನ್ನ ಆಶಯ ಹಾಗೂ ಅಪಾರ ಸಾಧ್ಯತೆಗಳಿರುವ ಕಥನದ ಕಾರಣದಿಂದಾಗಿ ಗಮನಸೆಳೆಯುತ್ತದೆ. 'ಗ್ರಾಮಭಾರತ'ದ ಚೆಲುವು, ಜೀವಂತಿಕೆ, ಅವನತಿಯನ್ನು ಚಿತ್ರಿಸಲು ನಿರ್ದೇಶಕರು ಪ್ರಯತ್ನಿಸಿದಂತಿದೆ. ಊರವರ ದನಗಳನ್ನು ಕಾಯುವ ಕುಟುಂಬವೊಂದರ ತವಕತಲ್ಲಣಗಳ ಚಿತ್ರಣ ಸಿನಿಮಾದಲ್ಲಿದೆ. ಗೋಪಾಲಕ ಕುಟುಂಬದ ತಂದೆ–ಮಗನಾಗಿ ವೈಜನಾಥ ಬಿರಾದಾರ್ ಹಾಗೂ ದುನಿಯಾ ವಿಜಯ್ ಅಭಿನಯ ಚೆನ್ನಾಗಿದೆ. 'ಮಂದೆಯಲಿ ಒಂದಾಗುವ' ರಂಗಾಯಣ ರಘು ಅವರ ಪಾತ್ರವೂ ಸೊಗಸಾಗಿದೆ. ವ್ಯಾಪಾರ ಮತ್ತು ಮನುಷ್ಯತ್ವಗಳ ನಡುವಿನ ಹೊಯ್ದಾಟ ಚಿತ್ರದ ಕೇಂದ್ರದಲ್ಲಿದೆ. ಆದರೆ, ಇಂಥದೊಂದು ಕಥೆಗೆ ಅಗತ್ಯವಾದ ಪ್ರಾದೇಶಿಕ ವಾತಾವರಣ ಚಿತ್ರದಲ್ಲಿ ತೆಳುವಾಗಿದೆ. ■